## ಅದನ್ನೇನು ನೋಡುವುದು?

ಅಂದು ಭಾನುವಾರ ಉಪಾಹಾರ ಮುಗಿಸಿ, ಟೀವಿ ನೋಡುತ್ತ ಕುಳಿತಿದ್ದೆ. ಅಪರೂಪಕ್ಕೆ ನನ್ನ ಸೋದರಮಾವನ ಮಗ ನಾಗಭೂಷಣ ಬಂದ. ಆತನಿಗೆ ಮಾತು ಮಾತಿಗೆ ತಮಾಷೆ ಮಾಡುವ ಸ್ವಭಾವ. ಟೀವಿಯಲ್ಲಿ 'ಹೆಂಡ್ತೀರ ದರ್ಬಾರ್' ಸಿನಿಮಾ ಓಡುತ್ತಿತ್ತು. ನಾನು, 'ಈ ಸಿನಿಮಾ ನೋಡಿದ್ದೀಯಾ?' ಎಂದು ಕೇಳಿದೆ. ಅದಕ್ಕವನು, 'ಮದುವೆಯಾಗಿ 20 ವರ್ಷ ಆಯ್ತು. ಅನುಭವಿಸುತ್ತಿದ್ದೀನಲ್ಲ? ಮತ್ತೆ ಅದನ್ನೇನು ಟೀವಿಯಲ್ಲಿ ನೋಡುವುದು?' ಎಂದ. ನಾನು ನಕ್ಕೂ ನಕ್ಕೂ ಸುಸ್ತಾದೆ.

**ಎಂ.ಕೆ. ಮಂಜುನಾಥ್**





ಕಲೆ: ಗಣೇಶ ಆಚಾರ್ಯ

## ಮತಾಂತರ

ನನ್ನ ಮೊಮ್ಮಗಳು ಸಾಫ್ಟ್‌ವೇರ್ ಎಂಜಿನಿಯರ್. ವರ್ಕ್ ಫ್ರಂ ಹೋಮ್ ಎಂದು ಮನೆಯಲ್ಲೇ ಕೆಲಸ ಮಾಡುತ್ತಿದ್ದಳು. ಒಬ್ಬಳಿಗೇ ಬೇಜಾರು ಎಂದು, ತನ್ನ ಗೆಳತಿಯ ಮನೆಯಲ್ಲಿ ಒಂದು ನಾಯಿಮರಿ ಇದೆ. ಅದನ್ನು ತೆಗೆದುಕೊಳ್ಳುತ್ತೇನೆ ಎಂದಳು. ಬೇಡ ಎಂದರೂ 25 ಸಾವಿರ ರೂಪಾಯಿ ಕೊಟ್ಟು ನಾಯಿಮರಿ ತಂದಳು. ಮಾರನೇ ದಿನ ಬೀದಿ ನಾಯಿಗಳ ಗಲಾಟೆ ಕೇಳಿದ ನಾಯಿಮರಿ ತಾನೂ ಹೊರಗೆ ಹೋಗಬೇಕೆಂದು ಓಡಲು ನೋಡುತ್ತಿತ್ತು. ಅದಕ್ಕೆ ನಮ್ಮ ಮಗ, 'ಬೇಡ ಕಣೊ, ಅವರು ಸರಿ ಇಲ್ಲ. ನಿನ್ನನ್ನ ತಮ್ಮ ಧರ್ಮಕ್ಕೆ ಸೇರಿಸಿಕೊಂಡು ಮತಾಂತರ ಮಾಡಿ ಬಿಡ್ತಾರೆ' ಎಂದ!

**ಎಚ್.ಜಿ. ಕಮಲಮ್ಮ**